ಇ) ತೀರ್ಥಹಳ್ಳಿಯ ಈಗಿನ ಜನಸಂಖ್ಯೆಗೆ ಅಲ್ಲಿನ ಪೊಲೀಸ್‌ಸಿಬ್ಬಂದಿ ಕಡಿಮೆ ಎಂಬ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ, .

ಈ) ಈ ಪೊಲೀಸ್‌ಠಾಣೆಯಲ್ಲಿ ಕೊರತೆಯಿರವ ಸಿಬ್ಬಂದಿಯನ್ನು ಸರ್ಕಾರಯಾವಾಗ ಭರ್ತಿ ಮಾಡವುದು?

ಶ್ರೀ ಪಿ.ಜಿ. ಆರ್. ಸಿಂಧ್ಯಾ (ಗೃಹ ಸಚಿವರು) :

ಅ) 1221 :1

ಆ)

ಪೊಲೀಸ್‌ಸಬ್-ಇನ್ಸ್‌ಪೆಕ್ಟರ್	1
ಸಹಾಯಕ ಪೊಲೀಸ್‌ಸಬ್-ಇನ್ಸ್‌ಪೆಕ್ಟರ್	2
ಹೆಡ್‌ಕಾನ್ಸ್‌ಟೇಬಲ್	7
ಪೊಲೀಸ್ ಕಾನ್ಸ್‌ಟೇಬಲ್	26

ಇ) ಇಲ್ಲ

ಈ) ಉದ್ಭವಿಸುವುದಿಲ್ಲ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಜನರ ಸ್ವತ್ತು ಮಾನ, ಪ್ರಾಣವನ್ನು ಪೋಲೀಸರು ಕಾಯುತ್ತಾರೆ ಎಂದು ಜನ ತಿಳಿದುಕೊಂಡಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ 5 ವರ್ಷಗಳಿಂದ ಈಚೆಗೆ ಸುಮಾರು 15 ಪಟ್ಟು ವಾಹನಗಳ ಸಂಖ್ಯೆ ಜಾಸ್ತಿಯಾಗಿದೆ. ನೀವು ಬರೀ ಜನಸಂಖ್ಯೆ-ಯ ಅನುಪಾತ ಒಂದನ್ನೇ ಅನುಸರಿಸುತ್ತೀರಿ. ಅಲ್ಲಿ ನಡೆಯುವಂತಹ ಕ್ರೈಮ್ ಸಂಖ್ಯೆ, ಅಲ್ಲಿ ಇರುವಂತಹ ಟ್ರಾಫಿಕ್‌ಸಂಖ್ಯೆ ಆ ಮೇಲೆ ಕೋರ್ಟ್ ಡ್ಯೂಟಿ ಇವು ಪೋಲೀಸರಿಗೆ ಹೊರೆ ಆಗುತ್ತಿದೆ. ಪೋಲೀಸ್ ಸಿಬ್ಬಂದಿ ಬಹಳ ಕಡಿಮೆ ಇದೆ. ಅಲ್ಲಿಯ ಜನರಿಗೆ ರಕ್ಷಣೆ ಕೊಡಲಿಕ್ಕೆ ಮತ್ತು ಟ್ರಾಫಿಕನ್ನು ಕಂಟ್ರೋಲ್ ಮಾಡಲಿಕ್ಕೆ ಸರ್ಕಾರ ಆಲೋಚನೆ ಮಾಡಿದ್ದೆಯೇ?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಈ ವರ್ಷ ನಾವು ಸುಮಾರು ೫ ಸಾವಿರ ಜನ ಪೋಲೀಸರನ್ನು ನೇಮಕಾತಿ ಮಾಡಿಕೊಳ್ಳುತ್ತಾ ಇದ್ದೇವೆ. ನೇಮಕಾತಿ ಮಾಡಿಕೊಳ್ಳುತ್ತಾ ಇದ್ದೇವೆ. ನೇಮಕಾತಿ ಮಾಡತಕ್ಕಂತಹ ಸಂದರ್ಭದಲ್ಲಿ ಎಲ್ಲೆಲ್ಲಿ ವೇಕೆನ್ಸಿ ಇವೆ ಅಲ್ಲೆಲ್ಲ ಫಿಲ್‌ಅಪ್ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ. ತೀರ್ಥಹಳ್ಳಿ ಬಗ್ಗೆ ಸನ್ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅದನ್ನು ಗಮನದಲ್ಲಿಟ್ಟುಕೊಂಡು ಪರಿಶೀಲನೆ ಮಾಡುತ್ತೇನೆ.

ಶ್ರೀಮತಿ ಲೀಲಾವತಿ ಆರ್. ಪ್ರಸಾದ್ : ಪ್ರಶ್ನೆ ಸಂಖ್ಯೆ : 1050 ಇದು ಬೃಹತ್ ನೀರಾವರಿಗೆ ಸಂಬಂಧಪಟ್ಟ ಪ್ರಶ್ನೆ. ನಮ್ಮ ಇಲಾಖೆಗೆ ಸಂಬಂಧಪಟ್ಟದ್ದಲ್ಲ.

ಅಧ್ಯಕ್ಷರು : ಆ ಇಲಾಖೆಗೆ ವರ್ಗಾಯಿಸಿ ಉತ್ತರ ತರಿಸಿಕೊಡುತ್ತೇನೆ.

ಅಧ್ಯಕ್ಷರು : ಪ್ರಶ್ನೆ ಸಂಖ್ಯೆ : 897ನ್ನು ತಡೆಹಿಡಿಯಲಾಗಿದೆ. ಮುಖ್ಯಮಂತ್ರಿಗಳು ಬಂದಮೇಲೆ ಉತ್ತರವನ್ನು ತರಿಸಿಕೊಡುತ್ತೇನೆ.

ಶಿವಮೊಗ್ಗ ತಾಲ್ಲೂಕಿನ ಸಣ್ಣ ನೀರಾವರಿ ಯೋಜನೆಗಳು

731 -ಶ್ರೀ ಅಯನೂರು ಮಂಜುನಾಥ (ಹೊಸ ನಗರ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ತಾಲ್ಲೂಕಿನಲ್ಲಿರುವ ಸಣ್ಣ ನೀರಾವರಿಯ ಯೋಜನೆಗಳು ಯಾವುವು,

ಅ) ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಯೋಜನೆಯನ್ವಯ ನಡೆಯುತ್ತಿರುವ ಕಾಮಗಾರಿಗಳು ಯಾವುವು,

ಇ) ತಾಲ್ಲೂಕಿನಲ್ಲಿ ಹೊಸ ನೀರಾವರಿ ಯೋಜನೆಯನ್ನು ಸರ್ಕಾರದವರು ಕೈಗೆತ್ತಿಕೊಳ್ಳುವರೆ; ಹಾಗಿದ್ದರೆ ಅವುಗಳ ವಿವರ ತಿಳಿಸುವುದು?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಸಣ್ಣ ನೀರಾವರಿ ರಾಜ್ಯ ಸಚಿವೆಯವರು):

ಅ) ಹೊಸ ಕೆರೆ ನಿರ್ಮಾಣ, ಕೆರೆಗಳ ಜೀರ್ಣೋದ್ಧಾರ, ಪಿಶಪ್, ಅಣೆಕಟ್ಟು ಮತ್ತು ಫೀಡರ್ ಚಾನಲ್‌ಗಳ ಏತ ನೀರಾವರಿ ಯೋಜನೆ, ಸಣ್ಣ ನೀರಾವರಿ ಕಾಮಗಾರಿಗಳನ್ನು ಕೈಗೊಳ್ಳುವುದು.

ಆ) ಸಣ್ಣ ನೀರಾವರಿ ಯೋಜನೆಯನ್ವಯ ಸಣ್ಣ ನೀರಾವರಿ ದಕ್ಷಿಣ ವಲಯ ಹಾಗೂ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಕೆಳಕಂಡ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ.

ಸಣ್ಣ ನೀರಾವರಿ ದಕ್ಷಿಣ ವಲಯ

1) ಹೊಳಲೂರು ಏತ ನೀರಾವರಿ ಯೋಜನೆಯ ರಿಹ್ಯಾಬಿಲಿಟೇಷನ್

ಜಿಲ್ಲಾ ಪಂಚಾಯತ್

1) ಉಂಬಳೇಬೈಲು ಜಲಕನಕಟ್ಟೆ ಕೆರೆ ನಿರ್ಮಾಣ
2) ಜೋಡನಾಳ ಹತ್ತಿರ ಪಿಕಪ್ ನಿರ್ಮಾಣ
3) ತ್ಯಾಜವಳ್ಳಿ ಗೌಡಿಹಳ್ಳಕ್ಕೆ ಪಿರಪ್ ನಿರ್ಮಾಣ
4) ಮಂಜರಿ ಕೊಪ್ಪದ ಹತ್ತಿರ ಪಿರಪ್ ನಿರ್ಮಾಣ
5) ಗುಂಡೂರು ಗ್ರಾಮದಲ್ಲಿ ಗಂಗಾ ಕಲ್ಯಾಣ ಯೋಜನೆ
6) ಸುತ್ತುಕೋಟೆ ಗ್ರಾಮದಲ್ಲಿ ಗಂಗಾ ಕಲ್ಯಾಣ ಯೋಜನೆ
7) ಅಗಸನವಳ್ಳಿ ಗ್ರಾಮದಲ್ಲಿ ಗಂಗಾ ಕಲ್ಯಾಣ
8) ಉಂಬಳೆ ಬೈಲು ಗ್ರಾಮದ ತಾವರೆಕೆರೆಯ ಅಭಿವೃದ್ಧಿ
9) ಸಿರಿಗೆರೆ ಗ್ರಾಮದ ಸಿದ್ಧಯ್ಯನ ಕೆರೆಯ ಅಭಿವೃದ್ಧಿ
10) ಮತ್ತಿಕೆರೆಯನ್ನು ದುರಸ್ತಿಪಡಿಸುವುದು

ಇ) ಹೌದು. ಕೆಳಕಂಡ ಯೋಜನೆಗಳ ಆರ್ಥಿಕ ಮತ್ತು ತಾಂತ್ರಿಕ ಶಕ್ಯತೆಯನ್ನು ಪರಿಶೀಲಿಸಿ ಸಾಧುವಾದಲ್ಲಿ ತೆಗೆದುಕೊಳ್ಳಲು ಯೋಜಿಸಲಾಗಿದೆ.

1) ತುಂಗಾ ಏತ ನೀರಾವರಿ ಯೋಜನೆ
2) ಸೀಗೆಹಳ್ಳಿ ಹತ್ತಿರ ಗೌಡನ ಕೆರೆ ಅಭಿವೃದ್ಧಿ
3) ಅಲಗೇರಿ ಹತ್ತಿರ ಬಳಸೋಕೆರೆ ಅಭಿವೃದ್ಧಿ
4) ಸಿಂಗಮ್ಮನ ಕೆರೆ ಪೋಷಕ ನಾಲೆ ಅಭಿವೃದ್ಧಿ
5) ವಿಟಗೊಂಡನಕೊಪ್ಪ ಹತ್ತಿರ ಹುಲಿಕಟ್ಟೆ ಕೆರೆ ನಿರ್ಮಾಣ
6) ಕೋಟೆ ಹಾಳ ಹತ್ತಿರ ಹೊಸ ಕೆರೆ ನಿರ್ಮಾಣ
7) ಹರಮಗಟ್ಟ ಹೊಸ ಕೆರೆಯ ಫೀಡರ್‌ಚಾನಲ್ ನಿರ್ಮಾಣ

ಶ್ರೀ ಆಯನೂರು ಮಂಜುನಾಥ : ಅಧ್ಯಕ್ಷತೆ, ಹೊಸ ನೀರಾವರಿ ಯೋಜನೆಗಳನ್ನು ಪರಿಶೀಲನೆ ಮಾಡಿ ತೆಗೆದುಕೊಳ್ಳುತ್ತೇವೆಂದು ಹೇಳಿ ತುಂಗಾ ಏತ ನೀರಾವರಿ ಯೋಜನೆ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ತಾವು ತೆಗೆದುಕೊಂಡಿರುವ ತುಂಗಾ ಏತ ನೀರಾವರಿ ಯೋಜನೆ ಯಾವ ಹಂತದಲ್ಲಿದೆ ಎಂಬುದನ್ನು ದಯಮಾಡಿ ಮಂತ್ರಿಗಳು ತಿಳಿಸಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀಮತಿ ಲೀಲಾವತಿ ಆರ್. ಪ್ರಸಾದ್: ಸನ್ಮಾನ್ಯ ಅಧ್ಯಕ್ಷರೆ, ಈ ವರ್ಷದಲ್ಲಿ ಹೊಸ ಏತ ನೀರಾವರಿಗಳನ್ನು ತೆಗೆದುಕೊಳ್ಳುವ ಸಂದರ್ಭದಲ್ಲಿ ತುಂಗಾ ಏತ ನೀರಾವರಿ ಬಗ್ಗೆ ಪರಿಶೀಲನೆ ಮಾಡುತ್ತಿದ್ದೇವೆ. ಎರಡು ಕಾರ್ಪೋರೇಷನ್ ಮರ್ಜ್ ಆದಮೇಲೆ ಈ ತುಂಗಾ ಏತ ನೀರಾವರಿ ನಮ್ಮ ಇಲಾಖೆಗೆ ಬಂದಿದೆ. ಈ 1995-96ನೇ ವರ್ಷದಲ್ಲಿ ಕೆಲವು ಏತ ನೀರಾವರಿ ಯೋಜನೆಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಆಯನಾರು ಮಂಜುನಾಥ : ಯಾವಾಗ ಮಾಡುತ್ತೀರಂದು ಪ್ರಶ್ನೆ ಮಾಡಿದ್ದೆ. ಅದು ಯಾವ ಹಂತದಲ್ಲಿದೆ? ಇದಕ್ಕೆ ಮಂಜುರಾತಿ ಸಿಗದೆ ತಾಂತ್ರಿಕ ಸಮಿತಿಯ ಮುಂದೆ ಪೆಂಡಿಂಗ್ ಇತ್ತು. ಆ ಸಮಿತಿಯ ತೀರ್ಮಾನ ಏನಾಗಿದೆ?

ಶ್ರೀಮತಿ ಲೀಲಾವತಿ ಆರ್. ಪ್ರಸಾದ್ : ತಾಂತ್ರಿಕ ಸಮಿತಿಯಿಂದ ಇನ್ನೂ ಉತ್ತರ ಬಂದಿಲ್ಲ. ಬೇಗನೆ ತರಿಸಿಕೊಡುತ್ತೇನೆ. ಈ ಯೋಜನೆ ಇನ್ನೂ ಪ್ರಾರಂಭವಾಗಬೇಕು. ಸರ್ವೆ ಕೆಲಸ ಆಗಿದೆ.

ಶ್ರೀ ಆಯನೂರು ಮಂಜುನಾಥ : ಈ ಯೋಜನೆಯಿಂದ ಸುಮಾರು 7310 ಎಕರೆಗೆ ನೀರಾವರಿಯಾಗುತ್ತದೆ. ಈ ಏತ ನೀರಾವರಿ ಯೋಜನೆ ಶಿವಮೊಗ್ಗ ತಾಲ್ಲೂಕಿನಲ್ಲಿ ಇದೆ. ಈಗ ಸರ್ಕಾರ ಮಾಡಿರತಕ್ಕಂತಹ ಎಸ್ಟಿಮೇಟ್‌ನ ಪ್ರಾಕಾರ 12 ಕೋಟಿ 35 ಲಕ್ಷ ರೂಪಾಯಿ ಇದಕ್ಕೆ ಖರ್ಚು ಆಗುತ್ತದೆ. ಇದರಿಂದ ಸರಾಸರಿ 17,050 ಎಕರೆಗೆ ಶಾಶ್ವತ ನೀರಾವರಿಯನ್ನು ಒದಗಿಸಲಿಕ್ಕೆ ಸಾಧ್ಯ ಇದೆ. ಆದ್ದರಿಂದ ತುಂಗಾ ಏತ ನೀರಾವರಿ ಯೋಜನೆಗೆ ಬಹಳಷ್ಟು ಪ್ರಾಮುಖ್ಯತೆ ಕೊಟ್ಟು ತೆಗೆದುಕೊಳ್ಳಬೇಕೆಂದು ಸರ್ಕಾರಕ್ಕೆ ವನಂತಿ ಮಾಡುತ್ತಿದ್ದೇನೆ.

ಶ್ರೀಮತಿ ಲೀಲಾವತಿ ಆರ್. ಪ್ರಸಾದ್ : ಅದನ್ನು ಪರಿಶೀಲನೆ ಮಾಡುತ್ತೇನೆ.

ಅಧ್ಯಕ್ಷರು : ಶ್ರೀ ಶಾಮನೂರು ಶಿವಶಂಕರಪ್ಪನವರೆ, ನಮ್ಮ 928 ಪ್ರಶ್ನೆಗೆ ಬಂದಿಲ್ಲ. ಅದನ್ನು ತಡೆಹಿಡಿಯಲಾಗಿದೆ. ಉತ್ತರ ಬಂದಮೇಲೆ ಒದಗಿಸಿಕೊಡುತ್ತೇನೆ.

ಪರಿಶಿಷ್ಟ ಜಾತಿ ಮತ್ತು ವರ್ಗಗಳ ಮೇಲೆ ದೌರ್ಜನ್ಯ.

333 - ಶ್ರೀ ವೈ.ರಾಮಕೃಷ್ಣ (ಆನೇಕಲ್) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ ಮೂರು ತಿಂಗಳಿಂದ ಪರಿಶಿಷ್ಟ ಜಾತಿಗಳ ಹಾಗೂ ಪರಿಶಿಷ್ಟ ವರ್ಗಗಳ ಜನರ ಮೇಲೆ ನಡೆದಿರುವ ಗಲಭೆಗಳು, ಹಿಂಸಾಚಾರ, ಅತ್ಯಾಚಾರ, ಕೊಲೆಗಳು ಮತ್ತಿತರ ಅಪರಾಧಗಳ ಒಟ್ಟು ಸಂಖ್ಯೆ ಎಷ್ಟು, (ಜಿಲ್ಲಾವಾರು ಮಾಹಿತಿ ಒದಗಿಸುವುದು).

ಆ) ಈ ಬಗ್ಗೆ ಸತ್ತವರ ಕುಟುಂಬ ವರ್ಗದವರಿಗೆ ನೊಂದವರಿಗೆ, ಶಾರೀರಕ ತೊಂದರೆಗೊಳಗಾಗಿ ಆಸ್ಪತ್ರೆಗೆ ದಾಖಲಾದ ಜನರಿಗೆ ಸರ್ಕಾರದವರು ಕೊಟ್ಟ ಪರಿಹಾರ ಧನವೆಷ್ಟು,

ಇ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರು ವಾಸಿಸುತ್ತಿದ್ದ ಎಷ್ಟು ಗುಡಿಸಲುಗಳಿಗೆ ಮನೆಗಳಿಗೆ ಬೆಂಕಿ ಬಿದ್ದು ಸುಟ್ಟು ಹೋಗಿದೆ (ಜಿಲ್ಲಾವಾರು ವಿವರ ನೀಡುವುದು),

ಈ) ಈ ಬಗ್ಗೆ ಸರ್ಕಾರದವರು ಕೊಟ್ಟಿರುವ ಪರಿಹಾರ ಧನವೆಷ್ಟು, (ಜಿಲ್ಲಾವಾರು ಮಾಹಿತಿ ನೀಡುವುದು)?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :